ಮೈಸೂರ ಗೆಜಿಟ.

ನಂ. 49 ಸರ್ಕಾರದಿಂದ ಘಾಯಿಷ್ ಆದ್ದು. ಸ್ ೧೮೮೪.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 6, ಸ್ ೧೮೮೪.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್‌ಸ್ ಆಫೀಸರಿಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್‌ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜೀರು, ಡಿ|| ಡೆಪ್ಯೂಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೊಪರ್ಟಿಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಅಕ್ಟುಗಳು ವ ರಿಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 25ನೇ ನವಂಬರ್ 1884.

ಕ್ಯಾಂಪ್ ನಂ. 149.—ಕೋಲಾರದ ಮುನ್‌ಸಿಫ್ ಇ. ಸಿ. ಶಿವಜ್ಞಾನಂ ಪಿಳ್ಳೈಯವರಿಗೆ, ಘಾತಿ ಆದ ವೆಂಕಟರಾಯರಿಗೆ ಬದಲಾಗಿ 3ನೇ ಗ್ರೇಡ್ ಮುನ್‌ಸಿಫ್ ಕೆಲಸದಿಂದ 2ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 152.—ಇದರಡೀಕಂಡ 4ನೇ ಗ್ರೇಡಿನ ಆಕ್ಟಿಂಗ್ ಅಸಿಸ್ಟೆಂಟ್ ಕಮ್ಮಿಷನರುಗಳು, ಅದೇ ಗ್ರೇಡಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ:—

1. ಮೆ|| ಯ್. ಕೃಷ್ಣರಾವ್ ಯಂ. ಯೆ. ಯವರು, 1884ನೇ ಇಸವಿ ಆಗಸ್ಟ್ ಗುರ್ಯೇ ಲಾಗಾಯತು.
2. ಮೆ|| ರಘುನಾಥರಾಯರು, 1884ನೇ ಇಸವಿ ನವಂಬರ್ 22ನೇ ಮರ್ಕುಂ ಲಾಗಾಯತು.
3. ಮೆ|| ನಾಗೇಶರಾಯರು, ಡಿಟೋ ಡಿಟೋ

ನಂ. 152.—ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲ್ಲೂಕು ಅಮಲ್‌ದಾರ್ ಮೆ|| ಡಿಸಾಜಾಯವರಿಗೆ, 6ನೇ ಛಾಪೆ ಸಿವಿಲ್ ಲೀವ್ ಕೋಡಿನ 128ನೇ ಸೆಕ್ಷನ್ ಪ್ರಕಾರ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತದೆ.

ಳವಳ್ಳಿಗ್ಗಾ ತಾಲ್ಲೂಕು ಅಮಲ್‌ದಾರ್ ನಾಗೇಶರಾಯರು, ಮೆ॥ ಡಿಸ್ಟಾಜಾಯರವರು ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಮು ತ್ತೊಂದು ಹುಕ್ಕುಂ ಕೊಡುವ ತನಕ ಹೊನ್ನಾಳಿ ತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರೆ.

ನಂ. 155.—ಮೈಸೂರು ಫರ್ಸ್ಟ್‌ಕ್ಲಾಸ್ ಮುನಿಸಿಫ್ ಮೆ॥ ಸಿ. ಶ್ರೀನಿವಾಸಯ್ಯಂಗಾರ್ರು, 4ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ ಮಾಡಲ್ಪಟ್ಟು, ಮೈಸೂರು ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

ಸ್ಪೆಷಲ್ ಡ್ಯೂಟಿಮೇಲಿರುವ ಮುನಿಸಿಫ್ ಮೆ॥ ಎ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರು, 4ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ ಮಾಡಲ್ಪಟ್ಟು ದಿವಾನರ ಆಫೀಸು ಕೆಲಸದ ಬಗ್ಗೆ ನಿಯಮಿಸಲ್ಪಟ್ಟಿರುತ್ತಾರೆ.

ಅಟ್ಟಾಚಿ ಮೆ॥ ದಳವಾಯಿ ದೇವರಾಜೇ ಅರಸಿನವರು, ಸಬ್ ಪ್ರೊಟೆಂಪೂನೆ ಹಂಗಾಮಿ ತರೀಕ್ 4ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷ್ಟ ನರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ, ಅವರು ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿಯೇ ಯಿರತಕ್ಕದ್ದು.

2ನೇ ಗ್ರೇಡ್ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯರ್. ಜಲುವಯ್ಯಂಗಾರ್ರು, ಮೈಸೂರು ಡಿಸ್ಟ್ರಿಕ್ಟಿನಿಂದ ಕೋಲಾರ ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ—ಕೂಡ್ಲೇ ಕೆಲಸದ ಮೇಲೆ ಹೋಗತಕ್ಕದ್ದು.

ಮೆ॥ ದೇಕೇರಾಜೇ ಅರಸಿನವರು ಮಿಲಿಟೇರಿ ಇಲಾಖೆಯಲ್ಲಿ ಅಟ್ಟಾಚಿಯಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 160.—ಇದರಡೀ ಕಂಡ ಸ್ಯೂಪರ್ ನ್ಯೂಮರೇರಿ ಸಬಾರ್ಡಿನೇಟ್ ಜಡ್ಜ್‌ಗಳು, ಈ ಕೆಳಗೆ ಕಂಡ ಪ್ರಕಾರ ರೆವಿನ್ಯೂ ಇ ಲಾಖೆ ಅಸಿಸ್ಟೆಂಟ್ ಹಿಬ್ಬಂದಿಗೆ ವರ್ಗಮಾಡಲ್ಪಡತಕ್ಕದ್ದು;—

1ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಕೆಲಸಕ್ಕೆ—ಮೆ॥ ವಿ. ಪಿ. ಮಾಧವರಾವ್ ಬಿ. ಎ. ಯವರು.
2ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಕೆಲಸಕ್ಕೆ—ಮೆ॥ ಇ. ಚಿತಂಬರಂ ಅಯ್ಯರ್ ಯವರು.
2ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಕೆಲಸಕ್ಕೆ—ಮೆ॥ ಬಿ. ತಿರುಮಲಾಚಾರ್ಯರು ಬಿ. ಯಲ್. ಯವರು.
3ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಕೆಲಸಕ್ಕೆ—ಮೆ॥ ಎ. ಕುಪ್ಪುಸಾಮಿ ಮೊದಲಿಯಾರ್‌ರವರು.

ಮೊಕ್ಕಾಂ ಮೈಸೂರು, ತಾರೀಖು 1ನೇ ಡಿಶಂಬರ್ 1884.

ನಂ. 240–1.—ಮೈಸೂರು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಶ್ರೀನಿವಾಸಯ್ಯಂಗಾರ್ರು, 1ನೇ ಮ್ಯಾಜಿಸ್ಟ್ರೇಟ್ ಅಧಿಕಾರಗಳೂ, ಕ್ರಿ ಮಿನಲ್ ಪ್ರೊಸಿಜ್ಯೂರ್ ಕೋಡಿನ 27 (a) ಸೆಕ್ಷನಿನ 4 ವ 6ನೇ ಕ್ಲಾಜ್‌ಗಳಲ್ಲಿ ವಿವರಿಸೋಣಾದ ಅಂದರೆ 142ನೇ ಸೆಕ್ಷನ್ ಪ್ರಕಾರ ಫಿರ್ಯಾದಿ ಯಿಲ್ಲದೆ ಮೊಕದ್ದಮೆಗಳನ್ನು ದಾಖಲ್ಮಾಡಿ ಕೊಳ್ಳುವ ಮತ್ತು ಪುಟುಗಿ ವಿಚಾರಣೆ ಮಾಡುವ ಅಧಿಕಾರಗಳು ಹೊರತಾಯಿ, ಉಳಿದ ಜಾಸ್ತೀ ಅಧಿಕಾರಗಳು ಪುನಹಾ ಕೊಡಲ್ಪಟ್ಟಿರುತ್ತಾರೆ.

ಮೊಕ್ಕಾಂ ಮೈಸೂರು, ತಾರೀಖು 2ನೇ ಡಿಶಂಬರ್ 1884.

ನಂ. 256.—ಹಾಸನ ಸಬ್ ಡಿವೀಜ್ಯನ್ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಟಿ. ಆನಂದರಾಯರವರಿಗೆ, 1884ನೇ ಇಸವಿ ನವಂಬರ್ 8ನೇ ವರಕುಂ 166ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್ ಮೂಲಕ ಕೊಡಲ್ಪಟ್ಟಿದ್ದ ರಜಾಕ್ಕೆ ಜಾಸ್ತೀಯಾಗಿ ಬಂ ದು ವಾರದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತದೆ.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಭೂಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡೆ॥ ಕಮ್ಮಿಷನರ್ ವ ಫಾರೆಸ್ಟು ಆಫೀಸರ್ ಗಳಿಂದ ನಡಿಸಲ್ಪಡುತ್ತೆ:—

		ಸ್ವಲ್ಪ ಹೆಚ್ಚುಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಟಣ,	ತಾರೀಖು 1ನೇ ಡಿಶಂಬರ್ 1884	500
ಹುಣಸೂರು,	ತಾರೀಖು 4ನೇ ಡಿಟೋ ,,	
ಬೆಂಗಳೂರು,	ತಾರೀಖು 8ನೇ ಡಿಟೋ ,,	280
ಸೊರಬ,	ತಾರೀಖು 13ನೇ ಡಿಟೋ ,,	200

ಅನಂತಪುರ, ತಾರೀಖು 18ನೇ ಡಿಟೋ	„ ..	200
ಶಿವಮೊಗ್ಗಾ, ತಾರೀಖು 22ನೇ ಡಿಟೋ	„ ..	500
ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885	..	200
ಚಿಕ್ಕಮಗಳೂರು, ತಾ॥ 14ನೇ ಡಿಟೋ	„ ..	200
ಹಾಸನ, ತಾರೀಖು 21ನೇ ಡಿಟೋ	„ ..	400

ಹರಾಜಿನ ಷರತ್ತುಗಳು.—ಸ್ವ. 1874ನೇ ಇಸವಿ ಡಿಶಂಬರ್ 5ನೇ ಮುಕ್ತಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘೋಷಿಸಿ ಮಾಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಘೋದಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಗೆ ಫಾಯಿದೆಯು, 1885ನೇ ಇಸವೀ ಮಾರ್ಚೀ 25ನೇ ತಾರೀಖಿಗೆ ಅಖೈರಾಗುವದು.

ತಾರೀಖು 5ನೇ ನವಂಬರ್ 1884.

ನಂ. 168.—ಬೆಂಗಳೂರು ಷಹರ್ ಪೊಲೀಸ್ ಇಲಾಖೆ ಪೆರ್ಷ್ಷ ವ ಗ್ರಾಚ್ಯುಯಿಟಿಗಳಿಗೆ ಸಂಬಂಧಪಟ್ಟ ಮೈಸೂರು ದಿವಾನರವರ ಯಿದರಡೀಕಂಡ ಆರ್ಡರ್ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ :—

ನಂಬರ್ 4515–16—341, ತಾರೀಖು 31ನೇ ಅಕ್ಟೋಬರ್ 1884.

ಆರ್ಡರ್.—ಬೆಂಗಳೂರು ಷಹರಿನ ಪೊಲೀಸ್ ಸೂಪರ್ ಅನ್ಯುಏಷ್ಯ ಫಂಡಿಗೆ 1884ನೇ ಇಸವಿ ಏಪ್ರಿಲ್ 1ನೇ ಮುಕ್ತಂ ವರಿಗೆ 9,860—1—5 ರೂಪಾಯಿ ಜಮೆ ಆಗಿರುತ್ತೆ.

2. ಬೆಂಗಳೂರು ಷಹರ್ ಪೊಲೀಸ್ ಇಲಾಖೆಯು, ತಲಬ್ ವಿಷಯದಲ್ಲಿ, ದೇಶದ ಇತರ ಭಾಗಗಳ ಪೊಲೀಸ್ ಇಲಾಖೆ ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲೇ ಪ್ರಾಯಶಃ ಯಿರುತ್ತಿದೆ; ಮತ್ತು ಈ ದೇಶದ ಪೊಲೀಸ್ ಇಲಾಖೆ ತಮ್ಮಾಂ ನವಕರರಿಗೂ, ಸರ್ಕಾರ್ ನವಕರರು ಇತರ ಇಲಾಖೆಗಳಲ್ಲಿ ಪಡೆಯುವಂತೆಯೇ ಪೆರ್ಷ್ಷ ವ ಗ್ರಾಚ್ಯುಯಿಟಿಗಳು ಸರ್ಕಾರದಿಂದ ಕೊಡಲ್ಪಡುತ್ತಾ ಯಿಲ್ಲೆ. ಈ ಕಾರಣಗಳಿಂದ ಗವರ್ಮೆಂಟಿನವರು ಹುಕ್ಕುಂ ಮಾಡುವದೇನಂದರೆ, 1884ನೇ ಇಸವಿ ನವಂಬರ್ ಗುರ್ರೇ ತಾರೀಖು ಲಾಗಾಯತು ಬೆಂಗಳೂರು ಷಹರ್ ಪೊಲೀಸ್ ಸೂಪರ್ ಅನ್ಯುಏಷ್ಯ ಫಂಡ್ ಮೌಕೂಫಗತಕ್ಕದ್ದು ಮತ್ತು ಸದರೀ ತಾರೀಖಿನಲ್ಲಿ ಸದರೀ ಫಂಡಿಗೆ ಕೀರಿರತಕ್ಕ ತಮ್ಮಾಂ ಜಾಮೀರ್ಗಾಗಳೂ, ಮೊಬಲಗಗಳೂ, ಮೈಸೂರು ಗವರ್ಮೆಂಟಿಗೆ ವರ್ಗ ಮಾಡಲ್ಪಟ್ಟು ಗವರ್ಮೆಂಟಿನ ವಟ್ಟು ಕೆಲಸಗಳಿಗೋಸ್ಕರ ಕೊಟ್ಟು ಬಿಡಲ್ಪಡತಕ್ಕದ್ದು.

3. ಮೇಲೆ ಕಂಡ 1884ನೇ ಇಸವಿ ನವಂಬರ್ 1ನೇ ಮುಕ್ತಂ ಲಾಗಾಯತು ಬೆಂಗಳೂರು ಷಹರ್ ಪೊಲೀಸ್ ನವಕರರ ತಲಬಿನಿಂದ ಸದರೀ ಫಂಡಿಗೆ ಚಂದಾ ತರೀಕ್ ವಸೂಲ್ ಮಾಡಲ್ಪಡಕೂಡದು.

4. ಪೆರ್ಷ್ಷ ವ ಗ್ರಾಚ್ಯುಯಿಟಿಗಳ ವಿಷಯದಲ್ಲಿ ಇಂಡ್ಯ ಗವರ್ಮೆಂಟಿನವರ 1877ನೇ ಇಸವಿ ಮೇ 11ನೇ ಮುಕ್ತಂ 549ನೇ ನಂಬರಿನ ಇಸ್ತಿಹಾರ್ ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟ ನಿಬಂಧನೆಗಳು ತಾತ್ಕಾಲಿಕದಲ್ಲಿ ಬೆಂಗಳೂರು ಷಹರ್ ಪೊಲೀಸ್ ನವಕರರಿಗೂ ಲಗಾವಾಗತಕ್ಕದ್ದು.

ತಾರೀಖು 10ನೇ ನವಂಬರ್ 1884.

ನಂ. 181.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸವಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ವೈತ್ತೀವಾರಾಗಿ ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷ್ಟರುವಾಗಿ, ಉಳಿಕೆ ಯಾವದೂ ಇಲ್ಲದೆ ವೈತ್ತಿಗಳು ಚಡ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು ಪ್ರಥಮತಃ ಹರಾಜು ಮಾಡಲ್ಪಡುವ ವೃತ್ತಿಗಳ ಮೇಲೆ ಬಾಕೀ ಆಗತಕ್ಕ ಪೂರಾ ಕಂದಾಯದ ಮೊಬಲಗು ಹು ಟ ವ? ಆಗದೆ ಯಿರುವ ಪಕ್ಷದಲ್ಲಿ ಪೂರಾ ಗ್ರಾಮವನ್ನು ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ೃೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬ ೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರ? ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಪಾಷತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪ ಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸ ಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುನ್ಸೂಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯ ಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮ್ಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಅತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಸಬ್ಬರ್ಥಾನುಸಾರ ಸಬ್ ಡಿವೀಜ್ಞ ಆಫೀಸರಿಂದಾಗಲಿ ರುಜು ಮೊಹರು ಮಾಡೋಣಾದ ಒಂದು ಸರ್ಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿ ಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾ ಪಟ್ಟುಂತಿ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳ ಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ತಿಪ್ಪಟೂರು ತಾಲ್ಲೂಕು	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ. ತರೀ ಖುಷ್ಕಿ ಸಪ	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ಯೆಟೆರೆಟ್.	ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಅ. ಪೈ.	
ಬೆಂಗಳೂರು	ಕುಣಿಗಲ್	ಕುಣಿಗಲ್	ಜೋಡಿಕೃಷ್ಣ ಸಾಗರ ಹಾರ	ಅಗ್ರಹಾರ ಪುಟ್ಟಯ್ಯನ ಅರುಣಾಚಲ ಭಟ್ಟ	6 6 0	87 3 8	65 3 7	133 7 7	ಅಮಲ್ದಾರ್ರರವರು 1885ನೇ ಇಸವಿ ಜನವರಿ 7ನೇ ತಾರೀಖು ಕುಣಿಗಲ್ಲಿನಲ್ಲಿ.
ಕಡೂರು	ಪೆಲ್ಲೂರು	ತಗರೆ	ಜೋಡಿ ಸನ್ಯಾಸಿಹಳ್ಳಿ	ಭೂಗೀರತಮ್ಮ ಕೇಕವ್ವಾಚಾರೀ ಇತರ 8 ಮಂದಿ	ತರೀ ಖುಷ್ಕಿ ಎ. ಗುಂ. ಗ. 183 19 0	217 12 0	132 12 0	204 12 10 ಬಡ್ಡೀ ವ ಬಾಂದು ಲಾಗವಡು ವಗೈರೇ ದೇಖೀಲ್.	ಪೆಲ್ಲೂರಲ್ಲಿ ಅಮಲ್ದಾರ್ರರವರು 1885ನೇ ಇಸವಿ ಜನವರೀ ತಾರೀಖು 7ನೇ ತಾರೀಖು.

ಬಾ|ೋಜೀಬ. ಹುಕುಂ,

ಆರ್. ವಿಜಯಾಂದ್ರರಾವ್,

ಸೆಕ್ರಟೇರಿ.